ಸಾಹಿತ್ಯ ಪರಂಪರೆಯಲ್ಲಿ ಹೆಣ್ಣನ್ನು ಚಿತ್ರಿಸಲಾದ ಬಗೆಯು ತನ್ನೊಳಗೇ ತಾನೇ ಒಂದು ವಿಕಾಸವಾದದ ಕತೆಯಾಗಿದೆ.

**ಆಶಾ:** ರಾಧವ್ವ, ತಿರುಗಿ ಹೋದಳು ಬಗೆಯ ಕಥೆಗಳು ನಿಮ್ಮ ದೃಷ್ಟಿಕೋನದಲ್ಲಿ ಬದಲಾವಣೆಯಾಗಿರುವುದನ್ನು ಸೂಚಿಸುತ್ತವೆ ಅಲ್ಲವೆ?

**ವೀಣಾ:** ನಾನು ಬರೆಯಲು ಪ್ರಾರಂಭಿಸಿ ಅರ್ಧ ಶತಮಾನವೇ ಕಳೆಯಿತು. ಈ ದೀರ್ಘ ಅವಧಿಯಲ್ಲಿ ನನ್ನ ಸುತ್ತಲಿನ ಸಮಾಜದಲ್ಲಿ, ಜನರ ಜೀವನಶೈಲಿಯಲ್ಲಿ, ವಿಚಾರಧಾರೆಗಳಲ್ಲಿ, ಸ್ವತಃ ನನ್ನ ದೃಷ್ಟಿಕೋನದಲ್ಲಿ ಅದೆಷ್ಟೋ ಬದಲಾವಣೆಗಳಾಗಿವೆ. ಇದು ಸ್ವಾಭಾವಿಕವೂ ಹೌದು. ತರುಣ ವಯಸ್ಸಿನಲ್ಲಿ ಬರೆದ ಕತೆ–ಕಾದಂಬರಿಗಳ ಸ್ತ್ರೀಪಾತ್ರಗಳು ಎಲ್ಲವನ್ನೂ ಎದುರಿಸುವ ದಿಟ್ಟತವನ್ನಷ್ಟೇ ಅಲ್ಲ, ಎಲ್ಲವನ್ನೂ ಧಿಕ್ಕರಿಸಿ ನಡೆದು ಹೋಗುವ ಎದೆಗಾರಿಕೆಯನ್ನೂ ಒಂಥರಾ 'ಐ ಡೋಂಟ್ ಕೇರ್' ಮನೋಭಾವವನ್ನು ಹೊಂದಿದ್ದರೂ, ಜೀವನದ ಅನುಭವ ಆಳವಾಗುತ್ತಾ ಹೋದಂತೆ, ನಮ್ಮಲ್ಲಿ ಪರಿಪೂರ್ಣ ಸ್ತ್ರೀಸ್ವಾತಂತ್ರ್ಯಕ್ಕೆ ಕಾಲವಿನ್ನೂ ಪರಿಪಕ್ವವಾಗಿಲ್ಲವೆಂಬ ಅರಿವು ಸ್ಪಷ್ಟವಾಗುತ್ತಿದ್ದಂತೆ, ಹೊಂದಾಣಿಕೆಯ ಅವಶ್ಯಕತೆಯ ಅರಿವೂ ಉಂಟಾಗುವುದು ಅಷ್ಟೇ ಸಹಜವಾದುದು. ಸತತ ಸಂಘರ್ಷ ಮತ್ತು ಹೊಂದಾಣಿಕೆ ಇವೆರೆಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಪ್ರಸಂಗ ಬಂದಾಗ ನಮ್ಮ ವಾಸ್ತವಿಕ ಜೀವನದಲ್ಲಿ ಹೆಚ್ಚಿನ ಮಹಿಳೆಯರು ಹೊಂದಾಣಿಕೆಯನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ ಅಲ್ಲವೆ? ಇದಕ್ಕೂ ಧೈರ್ಯ, ಸಹನೆ, ಪ್ರಬುದ್ಧತೆ ಎಲ್ಲ ಬೇಕಾಗುತ್ತದೆ. ಅದರರ್ಥ ನಾನು ತಗ್ಗಿ ನಡೆಯುವುದನ್ನು ಪುರಸ್ಕರಿಸುತ್ತೇನೆ ಎಂದು ಮಾತ್ರ ಖಂಡಿತಾ ಅಲ್ಲ.

**ಆಶಾ:** ಮಹಿಳಾ ಸಂಕಥನದ ಇಂದಿನ ಹೊಸ ಹೆಜ್ಜೆಗಳ ಬಗ್ಗೆ ನಿಮ್ಮ ನಿಲುವೇನು?

**ವೀಣಾ:** ಈಗ ಹೊಸದಾಗಿ ಬರೆಯುತ್ತಿರುವವರು ಸಂಕೋಲೆ, ಕಟ್ಟಳೆಗಳನ್ನ ಕಳಚಿಕೊಂಡು ಬರೆಯುತ್ತಿದ್ದಾರೆ, ತಮ್ಮ ಎದುರಿಗಿರುವ ಸವಾಲುಗಳನ್ನು ಎದುರಿಸಲು ಬೇಕಾದ ಸಿದ್ಧತೆಗಳೆಲ್ಲ ಅವರಿಗಿದೆ ಅನ್ನಿಸುತ್ತದೆ. ಇದು ಬಹಳ ಮುಖ್ಯವಾದ ಸಂಗತಿ. ನಿರ್ಭೀತಿ ಮತ್ತು ಮುಕ್ತತೆಯಿಂದ ಬರೆಯುತ್ತಿರುವ ಈ ಲೇಖಕಿಯರು ಭವಿಷ್ಯದಲ್ಲಿ ಇನ್ನೂ ಹೆಚ್ಚಿನದನ್ನು ಸಾಧಿಸುತ್ತಾರೆ ಎನ್ನುವ ವಿಶ್ವಾಸವಿದೆ ನನಗೆ. ಇದು ಒಳ್ಳೆಯ ಲಕ್ಷಣವೆಂದು ಅನ್ನಿಸುತ್ತದೆ. ಐವತ್ತು ವರ್ಷಗಳ ಹಿಂದೆ ನಾವು ಎದುರಿಸುತ್ತಿದ್ದ ತಲ್ಲಣಗಳು ಈಗಿಲ್ಲ. ಹೆಣ್ಣಿನ ದೃಷ್ಟಿಕೋನ ಕ್ಷಿಪ್ರಗತಿಯಲ್ಲಿ ಬದಲಾವಣೆ ಕಾಣುತ್ತಾ ಇದೆ. ಸಮಾಜ ಮತ್ತು ಪುರುಷಲೋಕದ ದೃಷ್ಟಿಕೋನಗಳು ನಿಧಾನವಾಗಿ ಬದಲಾಗುತ್ತಾ ಇವೆ.

### ವೀಣಾ ಶಾಂತೇಶ್ವರ

ಕತೆಗಾರ್ತಿ ವೀಣಾ ಕನ್ನಡ ಕತೆಗಳಿಗೆ ಹೊಸನುಡಿಗಟ್ಟು, ಆಯಾಮ ಕೊಟ್ಟ ಲೇಖಕಿ. 'ಮುಳ್ಳುಗಳು', 'ಕೊನೆಯ ದಾರಿ', 'ಕವಲು', 'ಹಸಿವು', 'ಬಿಡುಗಡೆ' ಅವರ ಕಥಾಸಂಗ್ರಹಗಳಾದರೆ, 'ಗಂಡಸರು', 'ಶೋಷಣೆ, ಬಂಡಾಯ ಇತ್ಯಾದಿ...' ಅವರ ಕಿರುಕಾದಂಬರಿಗಳಾಗಿವೆ. ಪ್ರಸ್ತುತ ಧಾರವಾಡದಲ್ಲಿ ನೆಲೆಸಿದ್ದಾರೆ.

### ಎಂ.ಎಸ್. ಆಶಾದೇವಿ

ಕನ್ನಡದ ಪ್ರಮುಖ ವಿಮರ್ಶಕಿ, ಅನುವಾದಕಿ ಆಶಾದೇವಿ ವೃತ್ತಿಯಲ್ಲಿ ಅಧ್ಯಾಪಕರು. 'ಸ್ತ್ರೀಮತವನುತ್ತರಿಸಲಾಗದೆ?', 'ನಾರೀಕೇಳಾ', 'ಬೆಳಕಿಗಿಂತ ಬೆಳ್ಳಗೆ' ಅವರ ವಿಮರ್ಶಾ ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.